

ಶಿಲ್ಪಿಗಳಂತೆ, ಗುಹಾಮಾನವರಂತೆ ಕೂದಲು ಬಿಟ್ಟವರಿಗೆ ಕ್ಷೌರಿಕರು ಕತ್ತರಿ, ಬಾಚಣಿಗೆ ಹಿಡಿದು ರೂಪಾಂತರ ಮಾಡುವ ಶಿಲ್ಪಿಗಳೆನ್ನಬಹುದು. ಕೊರೊನಾ ಕಾಲದಲ್ಲಿ ಬಹಳಷ್ಟು ಜನರು ಸಲೂನಿಗೆ ಹೋಗಲಾಗದೆ ಮನೆಯಲ್ಲಿ ತಮ್ಮ ಹೆಂಡತಿ, ಒಡಹುಟ್ಟಿದವರನ್ನು ಒತ್ತಾಯಿಸಿ ಅವರ ಕೈಯಿಂದ ತಮ್ಮ ತಲೆಗೆ ಕತ್ತರಿ ಹಾಕಿಸಿಕೊಂಡ ಸುದ್ದಿಯೂ ಹರಿದಾಡಿತು. ಮಹಾತ್ಮ ಗಾಂಧಿಯವರು ತಮ್ಮ ಕೂದಲನ್ನು ತಾವೇ ಕತ್ತರಿಸಿಕೊಂಡಿದ್ದರೆಂದು ಕೂಡ ಓದಿದ್ದೇನೆ.

ಪುಣ್ಯಕ್ಷೇತ್ರಗಳಲ್ಲಿ ತಲೆ ಬೋಳಿಸುವುದನ್ನು ಕೇಶಮುಂಡನ ಅಥವಾ ತಲೆ ಮಂಡೆ ಕೊಡುವುದು ಎನ್ನುತ್ತಾರೆ, ಹೋಗಲಾಗದವರು ಕ್ಷೌರದ ಅಂಗಡಿಯಲ್ಲೇ ಕೇಶಮುಂಡನ ಮಾಡಿಸಿಕೊಳ್ಳುವುದೂ ಉಂಟು. ಬಹುಶಃ ಕ್ಷೌರದ ಅಂಗಡಿಯೆ ಅವರಿಗೆ ದೇವಾಲಯ. ಮೊನ್ನೆ ಕನ್ನಡಿಯ ಮುಂದೆ ನಿಂತು ಬಾಚಿಕೊಳ್ಳುವಾಗ ನನ್ನ ತಲೆ ನೋಡಿ ನನಗೆ ದಿಗ್ಭ್ರಮೆಯಾಯಿತು. ತಲೆಯಲ್ಲಿದ್ದ ಅಲ್ಪಸ್ವಲ್ಪ ರೇಷ್ಮೆ ಕೂದಲು ಮಂಗಮಾಯವಾಗಿ ನೆತ್ತಿ ಕಂಡೊಡನೆ ಗಾಬರಿಯಾಯಿತು. ಏನೋ ಹೇಳಲಾರದ ಸಂಕಟದಿಂದ ಅಲ್ಲೇ ಶತಪಥ ಹಾಕತೊಡಗಿದೆ.

ಅದೇ ಹೊಯ್ದಾಟದಲ್ಲೇ ಮನಸು ಕೆಲ ವರ್ಷಗಳ ಹಿಂದೆ ಓಡಿತು. ನಾವು ಹೋಗುತ್ತಿದ್ದ ಎಂ.ಆರ್. ಎಸ್. ಕಟ್ಟಿಂಗ್ ಶಾಪ್ ನವೀಕರಣಗೊಂಡು 'ಹೇರ್ ಬೊಟಿಕ್' ಎಂದು ಮರುನಾಮಕರಣಗೊಂಡು ಹೊಸ ವಿನ್ಯಾಸದಿಂದ ಕಂಗೊಳಿಸಿದಾಗ ನಮಗೆ ಅದೆಷ್ಟು ಸಂಭ್ರಮ! ಅದರ ಉದ್ಘಾಟನೆಗೆ ಕನ್ನಡ ಚಲನಚಿತ್ರ ನಟರು ಬಂದಿದ್ದುದನ್ನು ನೋಡಿದ ನಾವು ಮನೆಯವರಿಗೆ, ಅಕ್ಕಪಕ್ಕದವರಿಗೆ, ನಮಗೆ ತಿಳಿದವರಿಗೆಲ್ಲ ಡಂಗೂರ ಹಾಕಿದ್ದಾಯಿತು. ಕಟ್ಟಿಂಗ್ ಶಾಪ್ ಓನರ್ ಮಗ ಥೇಟ್ ಸಿನಿಮಾ ಹೀರೊ ತರಹವೇ ಇದ್ದ. ತನ್ನ ಮಗನಿಗೋಸ್ಕರವೇ ಲಕ್ಷಾಂತರ ಹಣ ಸುರಿದು 'ಶ್ರೀ ರಾಮಾಂಜನೇಯ ಯುದ್ಧ' ಚಲನಚಿತ್ರ ಕೂಡ ತಯಾರಿಸಿದರು. ಆದರೆ ಕಾರಣಾಂತರಗಳಿಂದ ಆ ಚಿತ್ರ ತೆರೆ ಕಾಣಲಿಲ್ಲ. ನಾವು ಗೆಳೆಯರೆಲ್ಲ ಸೇರಿದಾಗ ಇಂತದ್ದೇ ಹಲವಾರು ವಿಷಯಗಳು ಕಾಫಿ ಹೀರುತ್ತ ಹರಟೆ ಹೊಡೆಯಲು ಸಿಗುತ್ತಿದ್ದ ವಿಷಯಗಳು. ಕಾಲೇಜು ದಿನಗಳಲ್ಲಿ ಕೆಲವೊಂದು ಸಿನಿಮಾ ಹೀರೋಗಳಿಂದ ಪ್ರಭಾವಿತನಾಗಿ ಕೂದಲು ಬೆಳೆಸಿ ಭುಜ ತಾಕುತ್ತಿದ್ದ ಕೂದಲನ್ನು ಗಾಳಿಯಲ್ಲಿ ಕೈಬೆರಳುಗಳಲ್ಲಿ ಹಿಂದಕ್ಕೆ ತಳ್ಳಿ ಖುಷಿಪಡುತ್ತಿದ್ದೆ, 'ಕೇಶಂ ಪುರುಷ ಲಕ್ಷಣಂ' ಎಂಬ ಧ್ಯೇಯೋಕ್ತಿಯ ನೆನಪಿಸುವಂತೆ. ಆದರೆ ಈಗ!...

ಇತ್ತೀಚೆಗೆ ಎಲ್ಲಾ ವಯೋಮಾನದವರು ತಮ್ಮ ಬಿಳಿಯ ಕೂದಲನ್ನು ಕಪ್ಪಾಗಿಸಲು ಹರಸಾಹಸ ಮಾಡುತ್ತಾರೆ. ಯುವಜನಾಂಗದವರು ಕಂದು, ಬಿಳಿ, ನೀಲಿ, ಕೆಂಪು ಬಣ್ಣಗಳನ್ನು ಹಚ್ಚಿಕೊಂಡು ತಮ್ಮ ಸೌಂದರ್ಯ ಹೆಚ್ಚಿಸಿಕೊಳ್ಳುತ್ತಾರೆ. ತಮ್ಮ ಕೇಶ ವಿವಿಧ ಬಣ್ಣಗಳ ಈಸ್ಟ್‌ಮನ್ ಕಲರ್‌ನಂತೆ ಕಾಣಿಸಲು ಇಷ್ಟಪಡುತ್ತಾರೆ. ಕೂದಲುಗಳಿಗೆ ನವಿಲುಗರಿಯಂತೆ ವಿವಿಧ ಬಣ್ಣ ಬಣ್ಣ ಹಚ್ಚಿಕೊಳ್ಳುವುದರಿಂದ ಹಚ್ಚುವವರ ವ್ಯಾಪಾರವೂ ವಿಸ್ತಾರಗೊಳ್ಳುತ್ತಿದೆ.

ಪರಿಸ್ಥಿತಿ ಹೀಗೆಲ್ಲ ಇರುವಾಗ ನನಗೆ ಬಣ್ಣ ಹಚ್ಚಿಕೊಳ್ಳುವುದು ಹಾಗಿರಲಿ, ಬಾಚಿಕೊಳ್ಳಲು ಕೂಡ ಕೂದಲಿರದ ಪರಿಸ್ಥಿತಿ ಎದುರಾಗುತ್ತಿರುವುದು ನೆನೆದು ಹೇಳಲಾರದ ಸಂಕಟವಾಗುತ್ತಿದೆ. ಆ ನೋವು ಮರೆಯಲು ಟಿ.ವಿ. ಹಾಕಿದರೆ 'ಒಂದು ಮೊಟ್ಟೆಯ ಕಥೆ' ಚಲನಚಿತ್ರ ಪ್ರಸಾರವಾಗುತ್ತಿತ್ತು. ಅದರಲ್ಲಿ ನಾಯಕನಟನ ಬೊಕ್ಕ ತಲೆಯ ಸುತ್ತ ಹೆಣೆದಿರುವ ಕಥೆ!

ಆದರೆ ಯಾವುದಕ್ಕೂ ಕೈ ಚೆಲ್ಲಿ ಕೂರಬಾರದು. 'ಮರಳಿ ಯತ್ನವ ಮಾಡು' ಎಂಬ ನಾಣ್ನುಡಿಯಂತೆ ಕೂಡಲೆ ಹೇರ್ ಟ್ರಾನ್ಸ್‌ಪ್ಲಾಂಟೇಷನ್, ಹೇರ್ ವೀವಿಂಗ್ ಮತ್ತು ಹೇರ್ ವಿಗ್‌ಗಾಗಿ ಗೂಗಲ್‌ನಲ್ಲಿ ಹುಡುಕಾಡಿದೆ. ಕೆಲವೇ ಗಂಟೆಗಳಲ್ಲಿ ಸಾಕಷ್ಟು ದೂರವಾಣಿ ಕರೆಗಳು ಬಂದದ್ದೇ ಅಲ್ಲದೆ ರಾಶಿಗಟ್ಟಲೆ ವಿಡಿಯೋಗಳು ನನ್ನ ಜಂಗಮವಾಣಿಗೆ ಬರಲಾರಂಭಿಸಿದವು.

'ರೀ ಯಾವುದೋ ಹೇರ್ ಬೊಟಿಕ್ ಫೋನ್. ನಿಮಗೆ ಯಾಕೆ ಮಾಡ್ತಾ ಇದಾರೆ, ಯಾವುದೋ ರಾಂಗ್ ನಂಬರ್ ಆಗಿರಬಹುದು' ಅಂತ ಜೋಕ್ ಮಾಡಿದಳು ನನ್ನ ಹೆಂಡತಿ. 'ಇಲ್ಲ ಚಿನ್ನಾ, ನನಗೇ ಆ ಕಾಲ್ ಬರ್ತಿರೋದು. ನೋಡು ನನ್ನ ತಲೆ ಹೇಗಾಗಿದೆ. ಎಷ್ಟು ಖುಷಿಯಾಗಿ ಕಟ್ಟಿಂಗ್‌ಗೆ ಹೋಗುತ್ತಿದ್ದೆ, ಈಗ ನೋಡಿದರೆ ಕಟ್ಟಿಂಗ್ ಮಾಡಿಸಿಕೊಳ್ಳಲು ಕೂಡ ಇಲ್ಲದಂತೆ ಕೂದಲು ಉದುರಿಹೋಗಿದೆ. ನಾವಿಬ್ಬರೂ ಹೊರಗೆ ಸುತ್ತಾಡುವಾಗ ನಾನು ಬೊಕ್ಕತಲೆ ಇಟ್ಟುಕೊಂಡು ಬಂದರೆ ಏನು ಚೆನ್ನಾಗಿರುತ್ತೆ. ಅದಕ್ಕೇ ನಾನೇ ಯಾವುದಾದರೂ ಮಾಡ್ರನ್ ಲುಕ್‌ನ ವಿಗ್ ಇದೆಯಾ ಅಂತ ನೋಡ್ತಿದ್ದೆ... ಅದಕ್ಕೇ ಆ ಫೋನ್ ಬಂದಿರಬೇಕು' ಅಂದೆ. ಅದಕ್ಕೆ ನನ್ನ ಹೆಂಡತಿ, 'ಏಯ್, ವಿಗ್ ಗಿಗ್ ಏನೂ ಬೇಡ. ನಿಮ್ಮ ತಲೆ ಪೂರ್ಣ ಚಂದಿರನಂತೆ ನೈಜವಾಗಿ ಹೊಳೆಯುವಂತಾದರೂ ಪರವಾಗಿಲ್ಲ, ಹಾಗೇ ಚೆನ್ನಾಗಿರ್ತೀರ' ಅನ್ನಬೇಕೇ. ಈಗ ಸುರಸುಂದರನಂತೆ ಕಾಣುವ ನನ್ನಾಸೆಗೆ ಕಲ್ಲು ಬಿದ್ದು ಎದುರಿಗೆ ಕನ್ನಡಿ ಅಣಕಿಸುತ್ತಿತ್ತು!

ಪ್ರತಿಕ್ರಿಯಿಸಿ: feedback@sudha.co.in